International Journal of Applied Research 2018; 4(8): 232-235




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2018; 4(8): 232-235
www.allresearchjournal.com
Received: 15-06-2018
Accepted: 19-07-2018

**ಆನಂದ ಎಸ್**
ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

**ಡಾ. ಎಸ್.ಎ. ಜಾವೀದ್**
ಪ್ರಾಧ್ಯಾಪಕರು, ಸ್ನಾತಕೋತ್ತರರಾಜ್ಯಶಾಸ್ತ್ರಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

**Correspondence**
**ಆನಂದ ಎಸ್**
ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

# ಮಾನವ ಹಕ್ಕುಗಳ ಹೊಸ ಬೆಳವಣಿಗೆ

**ಆನಂದ ಎಸ್, ಡಾ. ಎಸ್.ಎ. ಜಾವೀದ್**

**ಸಾರಾಂಶ**
ಪ್ರಸ್ತುತ ಆಧುನಿಕ ಜಗತ್ತು ಎನ್ನುವುದು ಹೊಸ ಸಂಶೋಧನೆಗಳ ಆಗರವಾಗಿ ಕಾಣುತ್ತದೆ. ಪ್ರಾಕೃತಿಕ ವಿಜ್ಞಾನಗಳು, ಭೌತ ವಿಜ್ಞಾನಗಳು, ವೈಜ್ಞಾನಿಕ ಚಿಂತನೆಗಳ ಮೂಲಕ ಸಾರ್ವತ್ರಿಕ ಸರ್ವಕಾಲಿಕ ಸತ್ಯವಾಗುತ್ತವೆಯೋ, ಅದೇ ನಿಟ್ಟಿನಲ್ಲಿ ಸಮಾಜ ವಿಜ್ಞಾನಗಳ ಸಂಶೋಧನೆಗಳ ಸಹ ಆಯಾಯ ಸಮಾಜಕ್ಕೆ ಅನುಗುಣವಾಗಿ ವೈಜ್ಞಾನಿಕ ಸತ್ಯಗಳನ್ನು ಪ್ರತಿಪಾದಿಸವುದು ಅನಿವಾರ್ಯ ಹಾಗೂ ಅವಶ್ಯಕವಾಗಿದೆ. ಆ ನೆಲೆಯೂ ಮಾನವ ಹಕ್ಕುಗಳ ಹೊಸ ಬೆಳವಣಿಗೆ ಎಂಬ ಲೇಖನವನ್ನು ಬರೆಯಲಾಗಿದೆ. ಅಂದರೆ ಸಮಾಜ ವಿಜ್ಞಾನಗಳಲ್ಲಿ ಒಂದು ರಾಷ್ಟ್ರ ಮತ್ತೊಂದು ರಾಷ್ಟ್ರ ವಿಭಿನ್ನ ರೀತಿಯ ಭಿನ್ನತೆಗಳನ್ನು ಹೊಂದಿರುವುದರಿಂದ ಪಾಶ್ಚಿಮಾತ್ಯ ಜಗತ್ತಿನಲ್ಲಿ ಉದಯಿಸಿದ ಮಾನವ ಹಕ್ಕುಗಳು ಪೌರಾತ್ಯ ರಾಷ್ಟ್ರಗಳಲ್ಲಿ ಸೃಷ್ಟಿಸುವ ಸಮಸ್ಯೆಗಳನ್ನು ಅವಲೋಕಿಸುವುದು ಇದರ ಉದ್ದೇಶವಾಗಿದೆ. ಹಾಗೆಯೇ ಇದರಲ್ಲಿ ಎದುರಾಗುವ ಮೂಲ ಸಮಸ್ಯೆ ಜಗತ್ತಿನಾದ್ಯಂತ ಮನುಷ್ಯ ಒಂದೇ ಅಲ್ಲವೇ ಅವರನ್ನು ಕಾಪಾಡುವುದು ಆದ್ಯ ಕರ್ತವ್ಯವೆಂದು ಆದರೆ ಈ ಸಂಶೋಧನಾ ಲೇಖನದಲ್ಲಿ ಕಾಪಾಡುವ ಬಗೆಯಲ್ಲಿಯೇ ಸಮಸ್ಯೆಯಿದ್ದು, ಅದರ ಮೂಲ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಈ ಲೇಖನ ಮಾರ್ಗಸೂಚಿಯಾಗಿದೆ.

**ಮುಖ್ಯ ಪದಗಳು:** ಮಾನವ ಹಕ್ಕುಗಳು, ಪಾಶ್ಚಿಮಾತ್ಯ ಜಗತ್ತು, ಸಮುದಾಯ ಪ್ರಜ್ಞೆ, ಧರ್ಮ, ರಿಲಿಜಿಯನ್, ನವ ಪೀಳಿಗೆ.

## ಪೀಠಿಕೆ
ಸಮಕಾಲೀನ ವ್ಯವಸ್ಥೆಯಲ್ಲಿ ಮಾನವ ಹಕ್ಕುಗಳು ಹೊಸ ಪೀಳಿಗೆಯವರನ್ನು ಎಷ್ಟರಮಟ್ಟಿಗೆ ತಲುಪುತ್ತಿದೆ ಎಂದು ಅರ್ಥೈಸುವುದು ತುಂಬಾ ಅನಿವಾರ್ಯತೆ ಹಾಗೂ ಅವಶ್ಯಕವಾದ ಅಂಶವಾಗಿದೆ. ಪ್ರಪಂಚದ ಇತಿಹಾಸದಲ್ಲಿ ಉದಾರವಾದಿ ಚಿಂತನೆಗಳ ಫಲವಾಗಿ ಹುಟ್ಟಿಕೊಂಡಿರುವ ಹಕ್ಕುಗಳು ಮನುಷ್ಯನು ಮನುಷ್ಯನಾಗಿ ಹಾಗೂ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಲು ನೆರವಾಗುವುದಕ್ಕೆ, ಮತ್ಸ್ಯನ್ಯಾಯ, ಅರಣ್ಯನ್ಯಾಯ ಪದ್ಧತಿಯಂತೆ ಜೀವಿಸದೇ ಪ್ರತಿಯೊಬ್ಬ ವ್ಯಕ್ತಿಯೂ ಸಹ ಬದುಕಲು ಅಥವಾ ಜೀವಿಸಲು ಅರ್ಹನನ್ನಾಗಿಸುವ ನಿಟ್ಟಿನಲ್ಲಿ ಮಾನವ ಹಕ್ಕುಗಳು ದಾಪುಗಾಲು ಇಟ್ಟಿರುವುದಂತೂ ನೈಜ ಸಂಗತಿ. ಪ್ರಪಂಚದ ಐತಿಹಾಸಿಕ ಹಿನ್ನೆಲೆಯನ್ನು ಅರಿತಾಗ ಹಕ್ಕುಗಳ ಮೂಲವೆಂಬುದು ಒಪ್ಪಂದವಾದಿಗಳು ಹಾಗೂ ರಿಲಿಜಿಯಸ್‌ನ ಮೂಲಗಳಲ್ಲಿ ಹೆಚ್ಚಿನದಾದ ರೀತಿಯಲ್ಲಿ ಕಾಣಬಹುದು. ಬಹುತೇಕವಾಗಿ ಒಪ್ಪಂದವಾದಿಗಳ ಸಿದ್ಧಾಂತದೊಳಗೆ ಹಕ್ಕುಗಳನ್ನು ಕಾನೂನಾತ್ಮಕವಾಗಿ ಬಂಧೀಸುವುದರ ಮೂಲಕ ಸ್ವತಂತ್ರವಾಗಿ ಎಲ್ಲರೂ ಬದುಕಲು ಅನುವು ಮಾಡಿಕೊಡುತ್ತದೆ. ಆದರೆ ಉದಾರವಾದಿ ಚಿಂತನೆಗಳ ಫಲವಾಗಿರುವ ಹಕ್ಕುಗಳ ಮೂಲವೆಂಬುದು ಕ್ರಿಶ್ಚಿಯನ್ ರಿಲಿಜಿಯನ್ನಿನ ತಳಹದಿಯಾಗಿದೆ. ಹಾಗೆಯೇ ಇದು ಸಾರ್ವತ್ರಿಕವಾಗಿ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ಅಳವಡಿಕೆಯಾಗುತ್ತದೆ ಎಂಬುದು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ. ಏಕೆಂದರೆ ಪೌರಾತ್ಯ ರಾಷ್ಟ್ರಗಳು ರಿಲಿಜಿಯಸ್ ಮೂಲ ತಳಹದಿಗಿಂತ ಬೇರೆಯದೇ ಆದ ಸ್ವರೂಪ ಮತ್ತು ವಿಭಿನ್ನ ಗುಣಲಕ್ಷಣಗಳನ್ನು ಹೊಂದಿರುವುದೇ ಇದಕ್ಕೆ ಕಾರಣವೆನ್ನಬಹುದು, ಅವುಗಳಲ್ಲಿನ ಪ್ರತಿಯೊಂದು ಅಂಶಗಳನ್ನೂ ತುಲನಾತ್ಮಕವಾಗಿ ಗ್ರಹಿಸುವುದೂ ಸಹ ಅಷ್ಟೇ ಮುಖ್ಯವಾದುದಾಗಿದೆ.

**ಧರ್ಮ ಮತ್ತು ಮಾನವ ಹಕ್ಕುಗಳು**

ಪ್ರಸ್ತುತ ಹೊಸ ಪೀಳಿಗೆಗೆ, ಧರ್ಮಕ್ಕೂ ಹಾಗೂ ಮಾನವ ಹಕ್ಕುಗಳಿಗೂ ಯಾವ ರೀತಿಯಾದ ಸಂಬಂಧವಿದೆ ಎಂದು ಅನುಮಾನ ಹುಟ್ಟಿಸುವುದು. ಇಲ್ಲಿ ಬಹು ಮುಖ್ಯ ಹೊಸ ಪೀಳಿಗೆಗಳ ಸ್ಥಿತ್ಯಂತರ ಹಾಗೂ ಅವುಗಳ ಉಳಿವಿಗೆ ಧರ್ಮ ಎಂಬುದು ಭದ್ರ ಬುನಾದಿ ಎಂದೇ ಗ್ರಹಿಸಬೇಕು. ಜಗತ್ತಿನ ಯಾವ ರಾಷ್ಟ್ರಗಳು ಸಹ ಧರ್ಮ, ರಿಲಿಜಿಯನ್, ನಂಬಿಕೆಗಳು, ಆಚರಣೆಗಳ ಹೊರತಾಗಿ ಇರಲು ಸಾಧ್ಯವಾಗದು. ಮಾನವ ಹಕ್ಕುಗಳ ಮೂಲ ನೆಲೆ ಎನ್ನುವಂತದ್ದು ಕ್ರಿಶ್ಚಿಯನ್ನಿನ ಮೂಲ ಬೇರಾಗಿದೆ. ಮೂಲತಃ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಂಡುಬರುವ ಕ್ರಿಶ್ಚಿಯಾನಿಟಿ ರಿಲಿಜಿಯನ್ ಎಂಬುದು ಪ್ರತಿಯೊಬ್ಬ ವ್ಯಕ್ತಿಗೂ ಸಹ 'ವ್ಯಕ್ತಿ ಸ್ವಾತಂತ್ರ್ಯ'ದ ಪರಿಕಲ್ಪನೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತವೆ. ಏಕೆಂದರೆ ಕ್ರಿಶ್ಚಿಯಾನಿಟಿಯ ಧರ್ಮಗ್ರಂಥವೆಂದೇ ಪ್ರಸಿದ್ಧಿಯಾಗಿರುವ ಬೈಬಲ್‌ನಲ್ಲಿ ಯಾವನೇ ಒಬ್ಬ ವ್ಯಕ್ತಿಯು ಜನಿಸಿದ ನಂತರ ಬೆಳೆಯ-ಬೆಳೆಯುತ್ತಾ ಸ್ವಾತಂತ್ರ್ಯ ವ್ಯಕ್ತಿಯಾಗಿದ್ದು ನೇರವಾಗಿ ಅವನು 'ಗಾಡ್' (God) ನ ಮಗನಾಗಿರುತ್ತಾನೆ. ಆದ್ದರಿಂದ ಅವನ ಒಂದು ವೈಯಕ್ತಿಕ ಅಥವಾ ವ್ಯಕ್ತಿಗತ ಸ್ವತಂತ್ರದಲ್ಲಿ ಮತ್ತೊಬ್ಬರು ಹಸ್ತಕ್ಷೇಪ ಮಾಡುವಂತದ್ದು ರಿಲಿಜಿಯಸ್‌ನ ನಂಬಿಕೆಗಳಿಗೆ, 'ಗಾಡ್'ಗೆ ಮೋಸ, ವಂಚನೆ ಮಾಡಿದಂತೆಯೇ ಸರಿ ಎನ್ನುವುದು ಇದರ ವಾದವಾಗಿದ್ದು ಅವನು ಉದಾರವಾದಿಯಾಗಲು ಅಥವಾ ಸ್ವತಂತ್ರ ವ್ಯಕ್ತಿಯಾಗಲು ಅನುವು ಮಾಡಿಕೊಡಬೇಕು. ಆ ಒಂದು ಉದಾರವಾದಿ ಚಿಂತನೆಯ ಫಲವಾಗಿ ಎರಡನೆಯ ಮಹಾಯುದ್ಧದ ನಂತರ ಮನುಷ್ಯನು ಸ್ವತಂತ್ರವಾಗಿ ಬದುಕಬೇಕೆಂದು ಇಡೀ ಪ್ರಪಂಚದಾದ್ಯಂತ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆಯನ್ನು ಘೋಷಿಸಲಾಯಿತು. ಇದರ ಫಲವೇ ಮಾನವ ಹಕ್ಕುಗಳ ಸ್ವರೂಪವಾಗಿದೆ ಎನ್ನಬಹುದು.

**ಅಧ್ಯಯನದ ವಿಧಾನ:** ಪ್ರಸ್ತುತ ಪ್ರಚುರಪಡಿಸುವ ಮಾನವ ಹಕ್ಕುಗಳ ಹೊಸ ಬೆಳವಣಿಗೆ ಲೇಖನವನ್ನು ಅನುಷಂಗಿಕ ಮೂಲಗಳ ಮುಖೇನ ಹಲವು ಗ್ರಂಥಗಳು, ನಿಯತಕಾಲಿಕೆಗಳು ಮತ್ತು ಕೆಲವು ಪ್ರಕರಣಗಳನ್ನು ಗಮನದಲ್ಲಿರಿಸಿಕೊಂಡು ತೌಲನಿಕ ಅಧ್ಯಯನ ಮತ್ತು ಸೈದ್ಧಾಂತಿಕ ನೆಲೆಗಳ ವಿಮರ್ಶಿಸಲಾಗಿದೆ.

**ಅಧ್ಯಯನದ ಉದ್ದೇಶ:**

- ಮಾನವ ಹಕ್ಕುಗಳ ಉಗಮದ ಮೂಲವನ್ನು ಅರಿತುಕೊಳ್ಳುವುದು.
- ಪಾಶ್ಚಿಮಾತ್ಯ ಜಗತ್ತಿನ ವ್ಯಕ್ತಿವಾದದ ಹಿನ್ನೆಲೆಯ ಮಾನವ ಹಕ್ಕುಗಳು ಭಾರತದಂತ ಪೌರಾತ್ಯ ರಾಷ್ಟ್ರದಲ್ಲಿ ಸೃಷ್ಟಿಸುವ ಸಮಸ್ಯೆಗಳ ಅವಲೋಕಿಸುವುದು.
- ಪೌರಾತ್ಯ ರಾಷ್ಟ್ರಗಳಲ್ಲಿನ ಕಾನೂನು ಮತ್ತು ಸಮುದಾಯ ಪ್ರಜ್ಞೆಯನ್ನು ತಿಳಿಯುವುದು.
- ನವಪೀಳಿಗೆಯ ಆಗಮನದ ಜೊತೆಗೆ ಸಮುದಾಯ ಪ್ರಜ್ಞೆ ಸಂಸ್ಕೃತಿ ಮತ್ತು ದೇಶಿಯತೆಯ ಅವನತಿಯನ್ನು ಗುರುತಿಸುವುದು.

**ಅವಲಂಬಿತರಾಗುತ್ತಿರುವ ನವ ಪೀಳಿಗೆ**

ಮಾನವ ಹಕ್ಕುಗಳ ಇತ್ತೀಚಿನ ಬೆಳವಣಿಗೆಗಳನ್ನು ಅವಲೋಕಿಸಿದಾಗ ಹಕ್ಕುಗಳು ಮತ್ತು ಅವುಗಳ ಸುತ್ತ ರಚನೆಯಾಗಿರುವ ವ್ಯೂಹಾತ್ಮಕ ಕಾನೂನುಗಳಿಗೆ ಎಲ್ಲರೂ ಹೊಂದಿಕೊಳ್ಳುವ ಮತ್ತು ಅವುಗಳೇ ಸತ್ಯವಾದುವುಗಳು, ನೈತಿಕ ಮೌಲ್ಯಗಳನ್ನು ಮನ್ವಂತರತೆಗೊಳಿಸಲು ಈ ಅಂಶಗಳಿಂದ ಸಾಧ್ಯವೆಂದು ನಂಬಿ ಅವುಗಳನ್ನು ತಮ್ಮ ಜೀವನದ ಪರಿಪಾಠವಾಗಿ ರೂಢಿಸಿಕೊಂಡಿದ್ದಾರೆ ಎಂದರೆ ತಪ್ಪಾಗಲಾರದು. ಒಂದು ಸಮಾಜ ನೋಡುವ ದೃಷ್ಟಿಕೋನ ಯಾವ ಸ್ವರೂಪವನ್ನು ಹೊಂದಿದೆ ಹಾಗೆಯೇ ಅದಕ್ಕೆ ಹೊಂದಿಕೊಳ್ಳುವ ರಾಜನೀತಿಯ ಅಂಶಗಳಾಗಿರಬಹುದು, ರೂಢಿ ಸಂಪ್ರದಾಯಗಳಾಗಿರಬಹುದು ಹಾಗೂ ಅಲ್ಲಿನ ಹೆಚ್ಚಿನದಾದ ಸಮುದಾಯ ಪ್ರಜ್ಞೆ ಎಂಬುದು ಬಹುಮುಖ್ಯ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಸಹ ಅಲ್ಲಗಳೆಯಲು ಸಾಧ್ಯವಾಗುವುದಿಲ್ಲ. ಈ ರೀತಿಯ ದ್ವಂದ್ವಮಯತೆ ಎಂಬುದು ಹೊಸ ಮಾನವ ಹಕ್ಕುಗಳು ಬೆಳವಣಿಗೆಗೆ ಬಹು ದೊಡ್ಡ ಸಮಸ್ಯೆಯೆಂಬ ಬಂಡೆಗಲ್ಲಾಗಿದೆ. ಹಾಗೆಯೇ ಅವಲಂಬಿತರಾಗುತ್ತಿರುವ ನವ ಪೀಳಿಗೆಗೆ ಅದರಲ್ಲೂ ಏಷ್ಯಾದ ರಾಷ್ಟ್ರಗಳಿಗೆ ಇದು ನಿಜವಾಗಿಯೂ ಸಮಸ್ಯೆ ಎನಿಸಿರಬಹುದು.

**ಭಾರತದಲ್ಲಿ ಮಾನವ ಹಕ್ಕುಗಳ ಪ್ರಾಚೀನತೆ ಮತ್ತು ವಾಸ್ತವತೆಯ ನಡುವಣ**

ಸ್ವಾಭಾವಿಕ ಮಾನವ ಹಕ್ಕುಗಳ ಐತಿಹಾಸಿಕ ಹಿನ್ನಲೆಯ ಪರಂಪರೆ ಎನ್ನುವಂತದ್ದು ನೈಸರ್ಗಿಕ ನಿಯಮದಡಿ ಬಂದಂತವುಗಳು ಅಂದರೆ ಪ್ರಕೃತಿದತ್ತವಾಗಿ ಹುಟ್ಟಿರುವಂತ ಮನುಷ್ಯನು ಮತ್ತೊಬ್ಬ ಮನುಷ್ಯನಿಗೆ, ಪ್ರಾಣಿಗಳಿಗೂ ಸಹ ಬದುಕುವ ಅಥವಾ ಜೀವಿಸುವ ಹಕ್ಕನ್ನು ಒದಗಿಸುವಂತದ್ದು ಆತನ ಆದ್ಯ ಕರ್ತವ್ಯವೆಂದು ತಿಳಿಸಲಾಗಿದೆ. ಒಂದು ತೆರನಾಗಿ ವಿಮರ್ಶಿಸಿದರೆ ಹಾಗೆಯೇ ಬದುಕಲು ಬಿಡಬೇಕು ಎಂದು ನಿಯಮ ಮಾಡಿದವರಾರು ಎಂಬುದು ಯಕ್ಷಪ್ರಶ್ನೆಯಾಗುತ್ತದೆ. ಒಂದು ವೇಳೆ ದೇವರು ಆ ರೀತಿಯಾದ ನಿಯಮ ಮಾಡಿದ್ದಾನೆ ಎಂದು ನಂಬುವುದಾದರೆ ಇತರ ಪ್ರಾಣಿಗಳು ಏಕೆ ಪ್ರಾಣಿಯನ್ನು ತಿಂದು ಬದುಕುತ್ತವೆ ಎಂಬ ಪ್ರಶ್ನೆಯೂ ಸಹ ಉದ್ಭವಿಸುತ್ತದೆ. ಆದ್ದರಿಂದ ಇದು ದೇವರ ನಿಯಮವಲ್ಲ ಪ್ರಜ್ಞಾವಂತನಾದ ಮನುಷ್ಯನೇ ತನ್ನ ಸಂತತಿಯನ್ನು ಉಳಿಸಿಕೊಳ್ಳಲು ಅಥವಾ ಮುಂದುವರೆಸಿಕೊಳ್ಳಲು ಹಾಕಿಕೊಂಡಂತಹ ಕೆಲವು ಕಟ್ಟುಪಾಡುಗಳೆಂದು ತಿಳಿಯಬಹುದು.

ಈ ನಿಟ್ಟಿನಲ್ಲಿ ಮನುಷ್ಯನು ಕಾಲಕ್ರಮೇಣ ಹಲವಾರು ವರ್ಷಗಳ ಕಾಲ ಜೀವಿಸಿರುವುದನ್ನು ಕಾಣಬಹುದು. ಅದಕ್ಕೆ ವೈಜ್ಞಾನಿಕ ಪುರಾವೆಗಳ ಲಭ್ಯತೆಯೂ ದೊರೆಯುತ್ತದೆ. ಈ ಜೀವನ ಕ್ರಮದಲ್ಲಿ ಪ್ರಪಂಚದಾದ್ಯಂತ ಕ್ರೂರ ಮೃಗೀಯ ವರ್ತನೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದಿಲ್ಲ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಅಂತಹ ಭೀಕರ ಪ್ರಮಾಣತೆ ಹೆಚ್ಚಾಗಿದ್ದರೆ ಮಾನವ ಕುಲವೇ ನಾಶವಾಗಬೇಕಿತ್ತು. ಕೆಲವೆಡೆ ಭೀಕರ ಯುದ್ಧ, ಸಾವು-ನೋವುಗಳು ಉಂಟಾಗಿರಬಹುದು. ಆದರೆ ಅದು ಕೆಲವೇ ಪ್ರದೇಶ ಅಥವಾ ರಾಷ್ಟ್ರಗಳಿಗೆ ಮಾತ್ರ ಸೀಮಿತ ಎಂಬುದು ಗಮನಾರ್ಹ ವಿಚಾರ (ಹಾಗಾದರೆ ಅವು ಮುಖ್ಯವಲ್ಲವೇ ಎಂಬುದಕ್ಕೆ ಮುಂದಿನ ಭಾಗದಲ್ಲಿ ಉತ್ತರ ಸಿಗುತ್ತದೆ). ಇನ್ನು ಭಾರತದ ಮಟ್ಟಿಗೆ ೧೯೪೮ಕ್ಕಿಂತ ಮುಂಚಿತವಾಗಿ ಮಾನವ ಹಕ್ಕಗಳಾಗಲೀ, ಅದರ ಸುಳಿವಾಗಲೀ ಇರಲಿಲ್ಲ. ಹಾಗಾದರೆ ಇಲ್ಲಿಯವರೆಲ್ಲ ಅನಾಗರೀಕರೆ ಎಂದರೆ ಅದನ್ನೂ ಒಪ್ಪಲು ಸಾಧ್ಯವಾಗದು ಏಕೆಂದರೆ ಇವರೆಲ್ಲರೂ ಸಹ ತಲೆ-ತಲಾಂತರಗಳಿಂದ ಸುಗಮವಾಗಿ ಜೀವನವನ್ನು ಸಾಗಿಸುತ್ತಲೇ ಬಂದವರು. ಹಾಗೂ ಅವರು ಅಷ್ಟೇ ಸುಭದ್ರವಾದ ಸಾಂಸಾರಿಕ ಜೀವನವನ್ನು ನಿಭಾಯಿಸುತ್ತಿದ್ದರು ಎನ್ನಬಹುದು. ಉದಾಹರಣೆಗೆ : ಒಂದು ಕುಟುಂಬದಲ್ಲಿನ ಗಂಡ-ಹೆಂಡಿರ

ಜಗಳವನ್ನು ಎರಡು ಊರಿನ ನಡುವಿನ ಸಮುದಾಯಗಳು ಒಂದು ಮಾಡುವ ನಿಟ್ಟಿನಲ್ಲಿ ಕಾರ್ಯಗತವಾಗುತ್ತಿದ್ದವು. ಆದರೆ ಇವತ್ತಿನ ದಿನ ಆ ಚಿತ್ರಣವೇ ಬದಲಾಗಿದೆ. ಇದಕ್ಕೆ ಮಾನವ ಹಕ್ಕುಗಳೇ ಪರೋಕ್ಷ ಕಾರಣವೆನ್ನಬಹುದು (ಭಾರತಕ್ಕೆ ಸೀಮಿತವಾಗಿ). ರೂಢಿ ಸಂಪ್ರದಾಯ, ಆಚರಣೆಗಳು, ನಂಬಿಕೆಗಳು ಹಾಗೂ ಸಂಬಂಧಗಳ ನಡುವೆ ಇದ್ದಂತಹ ಸಮುದಾಯ ಪ್ರಜ್ಞೆ ಎಂಬುದು ಬಹುತೇಕ ಮರೆಯಾಗಿದೆ.

**ಸಾಮಾಜಿಕ ಹಾಗೂ ಮಾನವೀಯ ಮೌಲ್ಯಗಳ ಕುಸಿತ**

ಕ್ರಿಶ್ಚಿಯನ್ನೇತರ ಹಾಗೂ ಏಷ್ಯಾದ ಬಹುತೇಕ ರಾಷ್ಟ್ರಗಳಲ್ಲಿ ಈ ಮಾನವ ಹಕ್ಕುಗಳ ಪರಿಕಲ್ಪನೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕೃತಕ ಸಮಸ್ಯೆಗಳನ್ನು ರಾಷ್ಟ್ರದಲ್ಲಿ ಹುಟ್ಟುಹಾಕಿ, ಕೃತಕ ಪರಿಹಾರಗಳನ್ನು ಹುಡುಕುವಂತಾಗಿದೆ. ಏಕೆಂದರೆ ಸಾಮಾಜಿಕ ಹಾಗೂ ಮಾನವೀಯ ಮೌಲ್ಯಗಳ ಕುಸಿತವಾಗಿದೆ. ಇದಕ್ಕೆ ಮಾನವ ಹಕ್ಕುಗಳ ಕಾರಣವಷ್ಟೇ ಅಲ್ಲದೇ ಆ ರಾಜ್ಯ ಅಥವಾ ರಾಷ್ಟ್ರಗಳಲ್ಲಿನ ಕಾನೂನುಗಳ ಮಾನ್ಯತೆಯನ್ನು ಎತ್ತಿ ತೋರಿಸುತ್ತದೆ. ಹಾಗಾದರೆ ಎಂತಹ ಕಾನೂನುಗಳಿಂದ ನೈತಿಕತೆ ಬೆಳೆಸಲು ಸಾಧ್ಯವೆಂದು ಕೇಳಿದರೆ ಏಷ್ಯಾದ ರಾಷ್ಟ್ರಗಳಲ್ಲಿ ಪ್ರಮುಖವಾಗಿ ಸಾಮಾಜಿಕ ಮೌಲ್ಯ ಸಮಾಜಗತವಾಗಿಯೇ ಸಮುದಾಯ ಪ್ರಜ್ಞೆಯ ಮುಖಾಂತರ ಬಂದಿವುದಾಗಿದೆ ಅದನ್ನು ಅನುಭವವಾತ್ಮಕ, ಕಾನೂನುಗಳ ಮುಖೇನ ದಾಖಲಿಸುವ ಪ್ರಯತ್ನ ನಡೆಯಬೇಕಾಗಿದೆ. ಆದರೆ ಇಂದಿನ ಕಾನೂನುಗಳು ಇದಕ್ಕೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರಿವೆ. ಉದಾಹರಣೆಗೆ : ಯಥೇಚ್ಛವಾಗಿ ಒಬ್ಬರಿಗೊಬ್ಬರು ಸಹಾಯಕವಾಗುತ್ತಿದ್ದ ಸಮಾಜದಲ್ಲಿ ಇಂದು ಯಾರಾದರೂ ಒಬ್ಬರು ಅಪಘಾತಕ್ಕೀಡಾದರೆ ಉಳಿದವರು ಕಾನೂನುಗಳು, ಕೋರ್ಟು, ಕಛೇರಿ, ಆಸ್ಪತ್ರೆಗಳಿಗೆ ಅಲೆಯಬೇಕಾಗುತ್ತದೆ ಎಂಬ ಕ್ಷುಲ್ಲಕ ಕಾರಣಕ್ಕಾಗಿ ಅಮಾನವೀಯ ಗುಣಗಳನ್ನು ರೂಡಿಸಿಕೊಳ್ಳುವಂತಹ ಪರಿ ಶುರುವಾಗಿದೆ. ಈ ರೀತಿಯಾದ ಕಾನೂನುಗಳು ಮನುಷ್ಯನು ಸ್ವಾಭಾವಿಕವಾಗಿ ಸ್ಪಂದಿಸುವಂತ ಮಾನವೀಯ ಗುಣಗಳಿಗೆ ಕಡಿವಾಣ ಹಾಕುವಂತಹ ಕಾರ್ಯವೆಸಗುತ್ತದೆ. ಕಾಲಕ್ರಮೇಣ ಇವತ್ತಿನ ದಿನ ಮತ್ತೆ ಮಾರ್ಪಾಡು ಮಾಡಿ ಅಂತಹ ಸಂದರ್ಭಗಳಲ್ಲಿ ಸ್ಪಂದಿಸಬಹುದು ಎಂದು ಹೊಸ ಕಾನೂನನ್ನು ತಂದಿದೆ. ಇದು ಒಂದು ರೀತಿಯ ಹಾಸ್ಯಾಸ್ಪದವೆನಿಸಬಹುದು. ಕಾನೂನುಗಳನ್ನು ಮಾಡುವುದು, ಅದು ಸರಿ ಹೊಂದದಿದ್ದರೆ ಮತ್ತೊಂದು, ಮೊಗದೊಂದು ಕಾನೂನುಗಳನ್ನು ಜನರಿಗೆ ಅರ್ಥವಾಗದಷ್ಟು ಬಂದುಬಿಟ್ಟಿವೆ. ಜೆರ್ಮಿ ಬೆಂಥಮ್ ಹೇಳುವ ಹಾಗೆ 'ಮನುಷ್ಯನು ನೈತಿಕವಾಗಿ ಬದಲಾಗದೇ ಕೋಟ್ಯಂತರ ಕಾನೂನುಗಳನ್ನು ತಂದರೂ ಅವು ವ್ಯರ್ಥವಾಗುತ್ತವೆ ಅಷ್ಟೆ'.

**ಉದಾರವಾದಿ ಚಿಂತನೆಯಿಂದ ಸಮುದಾಯ ಪ್ರಜ್ಞೆಯ ಅವನತಿ**

ಭಾರತವನ್ನು ಮಾನವ ಹಕ್ಕುಗಳ ದೃಷ್ಟಿಕೋನದಲ್ಲಿ ಅರ್ಥೈಸುವುದು ಮತ್ತು ಅರ್ಥ ಮಾಡಿಕೊಳ್ಳುವುದು ಎರಡೂ ಸಹ ಕಷ್ಟಕರವಾದ ವಾತಾವರಣವನ್ನು ಸೃಷ್ಟಿಸಿದಂತಿದೆ. ಉದಾರವಾದಿ ಚಿಂತನೆಯ ಫಲವಾದ ಮಾನವ ಹಕ್ಕುಗಳು ಪ್ರತಿಯೊಬ್ಬ ವ್ಯಕ್ತಿಯ ಸ್ವತಂತ್ರವನ್ನು ರಕ್ಷಿಸುವ ನಿಟ್ಟಿನಲ್ಲಿ ಭಾರತದಂತಹ ರಾಷ್ಟ್ರಗಳಲ್ಲಿನ ಸಮುದಾಯ ಪ್ರಜ್ಞೆಯನ್ನೇ ಮರೆಮಾಚುವಂತಹ ಕಾರ್ಯವಾಗಿ, ಇದರಿಂದ ಕೂಡಿ ಬಾಳಿದರೆ ಸ್ವರ್ಗ ಸುಖವೆಂಬುದಾಗಲಿ, ಅವಿಭಕ್ತ ಕುಟುಂಬಗಳ ಸಾರತೆ ಎಂಬುದು ದಿನದಿಂದ ದಿನಕ್ಕೆ ಮರೀಚಿಕೆಯಾಗುತ್ತಿದೆ. ಎಲ್ಲರ ಒಳಿತಿನಲ್ಲಿ ತನ್ನ ಒಳಿತನ್ನು ಕಾಣಬೇಕೆಂಬ ನಾಣ್ನುಡಿ ಪುಸ್ತಕಗಳಲ್ಲಿ ಮಾತ್ರ ರಾರಾಜಿಸುವಂತಾಗಿದ್ದು, ವಾಸ್ತವದಲ್ಲಿ ಅದರ ಅನುಕರಣೆಗೆ ಯಾವ ರಾಜನೀತಿಯಾಗಲೀ, ಯಾವ ಕಾನೂನುಗಳಾಗಲೀ ಸ್ಪಂದಿಸುತ್ತಿಲ್ಲವೆಂಬುದು ದುರಾದೃಷ್ಟವೇ ಸರಿ.

ಇತ್ತೀಚಿನ ದಿನಗಳಲ್ಲಿ ಕಾನೂನುಗಳಿಗೆ ಕೆಲವು ಮಾರ್ಪಾಡುಗಳನ್ನು ತರುವುದರ ಮೂಲಕ ಸಮಸ್ಯೆಗಳನ್ನು ತಳ ಮಟ್ಟದಲ್ಲಿಯೇ ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯಗತಗೊಳ್ಳುತ್ತಿವೆ. ಒಂದು ತೆರನಾಗಿ ಇದು ಸಮುದಾಯ ಪ್ರಜ್ಞೆಗೆ ಪರೋಕ್ಷವಾಗಿ ಮತ್ತೊಮ್ಮೆ ಪ್ರವೇಶ ಪಡೆದಂತೆಯೇ ಆಗಿದೆ. ಏನಾದರೂ ಸರಿ ಒಟ್ಟಿನಲ್ಲಿ ಜನರಲ್ಲಿ ಸಾಮಾಜಿಕ ಅನುಭವಗಳು ಬೇರೊಬ್ಬರ ಅನುಕರಣೆಯಾಗದಂತೆ ಗಾಂಧೀಜಿಯ ಕನಸಿನಂತೆ ಸ್ವದೇಶೀತನವನ್ನು ಉಳಿಸಿಕೊಳ್ಳುವುದು ಅನಿವಾರ್ಯ ಹಾಗೂ ಅವಶ್ಯಕವಾಗಿದೆ.

**ಉಪಸಂಹಾರ**

ಕೊನೆಯದಾಗಿ ಸಮಸ್ಯೆಗಳು, ವಾದ–ವಿವಾದಗಳು ಸಿದ್ಧಾಂತದೊಳಗೆ ಚರ್ಚೆಗೆ ಒಳಪಡುವುದು ಸಹಜ. ಒಟ್ಟಿನಲ್ಲಿ ಸಮುದಾಯ ಪ್ರಜ್ಞೆ ಮತ್ತು ಉದಾರವಾದಿ ಚಿಂತನೆಗಳ ಚರ್ಚೆಯಲ್ಲಿ ಒಂದು ಉತ್ತಮವಾದ ಹಾಗೂ ಫಲಪ್ರದವಾದ ನ್ಯಾಯ ಸಿಗುವಂತಾದರೆ ಪಾಶ್ಚಿಮಾತ್ಯ ಮತ್ತು ಪೌರಾತ್ಯ ರಾಷ್ಟ್ರಗಳ ನಡುವಿನ ಸಾಮಾಜಿಕ ಸಮಸ್ಯೆಗೆ ಪರಿಹಾರ ಸಿಕ್ಕಿದಂತೆಯೇ ಸರಿ. ಹಾಗೂ ಎರಡು ಸಮಾಜದಲ್ಲಿಯೂ ಇರುವುದು ಮನುಷ್ಯರೇ ಆಗಿರುವುದರಿಂದ ಸಾಂಸ್ಕೃತಿಕ ಹಿನ್ನೆಲೆ ಸಮಾಜದ ಸಂರಚನೆಯನ್ನು ರೂಪುಗೊಳಿಸುವುದರ ಮೂಲಕ ಮನುಕುಲದ ಏಳಿಗೆ ಸಾಧ್ಯವಾಗಲಿ ಎಂಬುದೇ ಇದರ ಆಶಯ.

**ಪರಿಹಾರಗಳು**

- ಮೊದಲನೆಯದಾಗಿ ಪಾಶ್ಚಿಮಾತ್ಯ ಜಗತ್ತಿನ ಮೂಲದಿಂದ ಉದಯಿಸಿದ ಮಾನವ ಹಕ್ಕುಗಳ ಮೂಲವನ್ನು ಪ್ರತಿಯೊಬ್ಬರು ಪಠ್ಯಕ್ರಮಗಳ ಮೂಲಕ ತಿಳಿಯುವಂತಾಗಬೇಕು.
- ಭಾರತೀಯ ಸಂಸ್ಕೃತಿಯ ಮೂಲಕ ಸಮುದಾಯ ಪ್ರಜ್ಞೆಯಿಂದ ರಾಷ್ಟ್ರಕ್ಕಾಗುವ ಉಪಯೋಗಗಳನ್ನು ಬಗೆಗೆ ಹೊಸ ಸಾಹಿತ್ಯದ ವಲಯದಲ್ಲಿ ಚಿಂತನೆಗಳು ಶುರುವಾಗಬೇಕು.
- ನವ ಪೀಳಿಗೆಗೆ ಮಾವನ ಹಕ್ಕುಗಳು ರಕ್ಷಣೆಗೋಸ್ಕರ ಕಾನೂನುಗಳನ್ನು ಸೃಷ್ಟಿಸುತ್ತವೆ. ಆದರೆ ಅದಕ್ಕಿಂತ ಸಮುದಾಯ ಪ್ರಜ್ಞೆಯುತ ರಾಷ್ಟ್ರಗಳಿಗೆ ಅದರ ಅವಶ್ಯಕತೆ ಇರುವುದಿಲ್ಲ ಎಂಬುದನ್ನು ತೋರಿಸಿಕೊಡುವುದು.

**ಪರಾಮರ್ಶನ ಗ್ರಂಥಗಳು**


1. O'Byrne Darren J. Human Rights: An Introduction, Saurabha Printers, New Delhi, 2004, 368-369.
2. Mohanty Jagannath. Human Rights Education, Deep and Deep Publications, New Delhi, 1-17.
3. Sharma HC. Politics and Human Rights, Book Enclave, Delhi, 1999, 149.
4. Sahni Mukesh, Naik Varun. Human Rights and Social Justice", Crescent Publishing House, New Delhi, 2011, 115.
5. Naim AA. (ed). Politics and Human Rights. Blackwell: Oxford, 1995.

6. Andrews JA. (ed.). Human Rights in Criminal Procedure: A comparative, 1982.
7. Study. Martinus Nijhoff publishers: The Hague.